Scanning

4002

# I Semester 3 Year LL.B. Examination, December 2019
## CONTRACT – I
### (2018 and 2019 Batch)

Duration : 3 Hours | Max. Marks : 80

**Instructions** : 1. Answer **all five** Units.

2. **One** essay type question and one problem or **one** short note are compulsory from **each** Unit.
3. Figures to the **right** indicate marks.
4. Answers should be written either in **English** or **Kannada** completely.

**ಸೂಚನೆಗಳು** :

1. ಎಲ್ಲಾ ಐದು ಯುನಿಟ್‌ಗಳಿಗೆ ಉತ್ತರಿಸಿರಿ.
2. ಪ್ರತಿಯೊಂದು ಯುನಿಟ್‌ನಿಂದ ಒಂದು ಪ್ರಶ್ನೆಗೆ ಮತ್ತು ಒಂದು ಸಮಸ್ಯೆಗೆ ಅಥವಾ ಒಂದು ಲಘು ಟಿಪ್ಪಣಿಗೆ ಉತ್ತರಿಸುವುದು ಕಡ್ಡಾಯ ಆಗಿರುತ್ತದೆ.
3. ಬಲಬದಿಯ ಅಂಕಿಯು ಗುಣಗಳನ್ನು ಸೂಚಿಸುತ್ತದೆ.
4. ಉತ್ತರವನ್ನು ಸಂಪೂರ್ಣವಾಗಿ ಇಂಗ್ಲೀಷ್‌ನಲ್ಲಿ ಅಥವಾ ಕನ್ನಡದಲ್ಲಿ ಬರೆಯಬೇಕು.

## UNIT – I

Q. No. 1. a) Define acceptance and what is the effect of acceptance ? Marks : 10

ಅಂಗೀಕಾರವನ್ನು ವ್ಯಾಖ್ಯಾನಿಸಿರಿ ಮತ್ತು ಅಂಗೀಕಾರದ ಪರಿಣಾಮವೇನು ?

OR/ಅಥವಾ

Define consideration and what are the essentials of a valid consideration ?

ಪ್ರತಿಫಲವನ್ನು ವ್ಯಾಖ್ಯಾನಿಸಿರಿ ಮತ್ತು ವಿದ್ಯುಕ್ತ ಪ್ರತಿಫಲದ ಅವಶ್ಯಕತೆಗಳು ಯಾವುವು ?

b) "A" has selected one book which is displayed in a departmental store for the purpose of purchase. But manager of the departmental store refused to sell the book. "A" has filed a suit against the manager for the breach of contract . Decide. Marks : 6

ಖರೀದಿಸುವ ಉದ್ದೇಶಕ್ಕಾಗಿ ''ಅ'' ನು ವಿಭಾಗೀಯ ಅಂಗಡಿಯಲ್ಲಿ ಪ್ರದರ್ಶಿಸಲ್ಪಟ್ಟ ಒಂದು ಪುಸ್ತಕವನ್ನು ಆಯ್ಕೆ ಮಾಡಿಕೊಂಡನು. ಆದರೆ ವಿಭಾಗೀಯ ಅಂಗಡಿಯ ವ್ಯವಸ್ಥಾಪಕನು ಪುಸ್ತಕವನ್ನು ಮಾರಾಟ ಮಾಡಲು ನಿರಾಕರಿಸಿದನು. ಕರಾರಿನ ಉಲ್ಲಂಘನೆಗಾಗಿ ''ಅ'' ನು ವ್ಯವಸ್ಥಾಪಕನ ವಿರುದ್ಧ ದಾವೆಯನ್ನು ಹೂಡುತ್ತಾನೆ. ತೀರ್ಮಾನಿಸಿರಿ.

OR/ಅಥವಾ

"A" has invited "B" for a dinner and "B" has accepted the invitation. Subsequently "B" could not attend the dinner. "A" has filed a suit against "B" to recover the dinner expenses. Can "A" recover the dinner expenses ?

''ಅ'' ನು ''ಬ''ನನ್ನು ಒಂದು ಭೋಜನಕೂಟಕ್ಕೆ ಆಮಂತ್ರಿಸುತ್ತಾನೆ ಮತ್ತು ''ಬ''ನು ಆಮಂತ್ರಣವನ್ನು ಅಂಗೀಕರಿಸುತ್ತಾನೆ. ನಂತರ ''ಬ''ನು ಭೋಜನಕೂಟಕ್ಕೆ ಹಾಜರಾಗಲಿಲ್ಲ. ಭೋಜನಕೂಟದ ಖರ್ಚಿನ ವಸೂಲಾತಿಗಾಗಿ ''ಅ''ನು ''ಬ'' ನ ವಿರುದ್ಧ ದಾವೆಯನ್ನು ಹೂಡುತ್ತಾನೆ. ''ಅ'' ನು ಭೋಜನಕೂಟದ ಖರ್ಚುಗಳನ್ನು ವಸೂಲಾತಿ ಮಾಡಬಹುದೇ ?

UNIT – II

Q. No. 2. a) Explain the provisions relating to capacity to contract. Marks : 10

ಕರಾರಿನ ಅರ್ಹತೆಗೆ ಸಂಬಂಧಪಟ್ಟ ನಿಯಮಗಳನ್ನು ವಿವರಿಸಿರಿ.

OR/ಅಥವಾ

Explain the effect of mistake on the legality of contract.

ಕರಾರಿನ ಕಾನೂನುಬದ್ಧತೆಯ ಮೇಲೆ ತಪ್ಪು ಗ್ರಹಿಕೆಯ ಪರಿಣಾಮವನ್ನು ವಿವರಿಸಿರಿ.

b) "A" and "B" entered an agreement before the marriage. In the agreement they agreed to live separately after the marriage. Is it a valid agreement ? Marks : 6

''ಅ'' ಮತ್ತು ''ಬ'' ಮದುವೆಯ ಪೂರ್ವದಲ್ಲಿ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾರೆ. ಆ ಒಡಂಬಡಿಕೆಯಲ್ಲಿ ಅವರು ಮದುವೆಯ ನಂತರ ಪ್ರತ್ಯೇಕವಾಗಿ ವಾಸಿಸಲು ಒಪ್ಪಿಕೊಳ್ಳುತ್ತಾರೆ. ಇದು ಸಿಂಧು ಒಡಂಬಡಿಕೆ ಆಗುವುದೇ ?

OR/ಅಥವಾ

"A" and "B" have entered an agreement. According to the agreement "A" must pay 5,000 Rs. to "B" and "B" must settle the marriage between "A" and "C" a lady. Whether agreement is enforceable ?

''ಅ'' ಮತ್ತು ''ಬ'' ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾರೆ. ಆ ಒಡಂಬಡಿಕೆಯ ಪ್ರಕಾರ ''ಅ'' ನು 5,000 ರೂ. ನ್ನು ''ಬ'' ನಿಗೆ ಸಂದಾಯ ಮಾಡಬೇಕು ಮತ್ತು ''ಬ'' ನು ''ಅ'' ನ ಮದುವೆಯನ್ನು ''ಸ'' ಎಂಬ ಹುಡುಗಿಯ ಜೊತೆ ಇತ್ಯರ್ಥಪಡಿಸಬೇಕು. ಈ ಒಡಂಬಡಿಕೆಯನ್ನು ಜಾರಿಗೊಳಿಸಬಹುದೇ ?

UNIT – III

Q. No. 3. a) "An agreement in restraint of trade is void ". Discuss. Marks : 10

" ವ್ಯಾಪಾರವನ್ನು ನಿರ್ಬಂಧಿಸುವ ಒಡಂಬಡಿಕೆ ಶೂನ್ಯ''. ಚರ್ಚಿಸಿ.

OR/ಅಥವಾ

Explain the provisions relating to appropriation of payment.

ಸಂದಾಯದ ವಿನಿಯೋಗಕ್ಕೆ ಸಂಬಂಧಪಟ್ಟ ನಿಯಮಗಳನ್ನು ವಿವರಿಸಿರಿ.

b) "A" agrees to pay 5,000 Rs. to "B" if B's house is destroyed. "B" has no house. Is it a valid contract ? Marks : 6

"ಬ" ನ ಮನೆ ನಾಶ ಆದರೆ 5,000 ರೂ. ನ್ನು ನೀಡುತ್ತೇನೆ ಎಂದು "ಅ" ನು ಒಪ್ಪಿಕೊಳ್ಳುತ್ತಾನೆ. "ಬ" ನಿಗೆ ಮನೆ ಇರುವುದಿಲ್ಲ. ಇದು ಸಿಂಧು ಕರಾರು ಆಗುವುದೇ ?

OR/ಅಥವಾ

"A" a famous singer agreed to sing in a programme arranged by "B". But before the programme "A" died. Can "B" compel "C" the son of "A" to sing in the programme ?

"ಬ" ನು ಏರ್ಪಡಿಸಿದ ಕಾರ್ಯಕ್ರಮದಲ್ಲಿ ಹಾಡುತ್ತೇನೆ ಎಂದು "ಅ" ಎಂಬ ಪ್ರಸಿದ್ಧ ಗಾಯಕನು ಒಪ್ಪಿಕೊಂಡಿದ್ದನು. ಆದರೆ ಕಾರ್ಯಕ್ರಮದ ಪೂರ್ವದಲ್ಲಿ "ಅ" ನು ನಿಧನನಾಗುತ್ತಾನೆ. ಕಾರ್ಯಕ್ರಮದಲ್ಲಿ ಹಾಡುವಂತೆ "ಬ" ನು "ಅ" ನ ಮಗನಾದ "ಸ"ನನ್ನು ಕಡ್ಡಾಯಪಡಿಸಬಹುದೇ ?

UNIT – IV

Q. No. 4. a) Who is a "finder of the goods" and what are the duties of a finder of the goods ? Marks : 10

"ವಸ್ತು ಸಿಕ್ಕಿದವ" ಅಂದರೆ ಯಾರು ಮತ್ತು ವಸ್ತು ಸಿಕ್ಕಿದವನ ಕರ್ತವ್ಯಗಳು ಯಾವುವು ?

OR/ಅಥವಾ

Explain "Ordinary damages" and "Special damages" with help of decided cases.

ನಿರ್ಧರಿಸಲ್ಪಟ್ಟ ಪ್ರಕರಣಗಳ ಸಹಾಯದೊಂದಿಗೆ "ಸಾಮಾನ್ಯ ಪರಿಹಾರ" ಮತ್ತು "ವಿಶೇಷ ಪರಿಹಾರ"ಗಳನ್ನು ವಿವರಿಸಿರಿ.

b) "A" has supplied one mobile to "B" who is a minor. Can "A" recover the price of the mobile from "B" ? Marks : 6

"ಅ" ಎಂಬುವನು "ಬ" ಎಂಬ ಅಪ್ರಾಪ್ತನಿಗೆ ಒಂದು ಜಂಗಮವಾಣಿ (ಮೊಬೈಲ್)ನ್ನು ಪೂರೈಸುತ್ತಾನೆ. ಜಂಗಮವಾಣಿ (ಮೊಬೈಲ್) ಯ ಬೆಲೆಯನ್ನು "ಅ"ನು "ಬ" ನಿಂದ ವಸೂಲಾತಿ ಮಾಡಬಹುದೇ ?

OR/ಅಥವಾ

"A" a famous dancer has agreed to dance in a festival conducted by "B". But due to illhealth "A" could not dance. "B" filed a suit against "A" for breach of contract. Decide.

"ಬ"ನು ಏರ್ಪಡಿಸಿದ ಉತ್ಸವದಲ್ಲಿ ನರ್ತಿಸುತ್ತೇನೆ ಎಂದು "ಅ" ಎಂಬ ಪ್ರಸಿದ್ಧ ನರ್ತಕಿಯು ಒಪ್ಪಿಕೊಂಡಿದ್ದಳು. ಆದರೆ "ಅ"ಳ ಅನಾರೋಗ್ಯದ ಕಾರಣದಿಂದಾಗಿ ನರ್ತಿಸಲು ಸಾಧ್ಯವಾಗಲಿಲ್ಲ. ಕರಾರು ಉಲ್ಲಂಘನೆಗಾಗಿ "ಬ"ನು "ಅ"ಳ ವಿರುದ್ಧ ದಾವೆಯನ್ನು ಹೂಡುತ್ತಾನೆ. ನಿರ್ಧರಿಸಿ.

UNIT – V

Q. No. 5. a) Explain the contracts which can be specifically enforced. Marks : 10

ನಿರ್ದಿಷ್ಟವಾಗಿ ಜಾರಿಗೊಳಿಸಬಹುದಾದ ಕರಾರುಗಳನ್ನು ವಿವರಿಸಿರಿ.

OR/ಅಥವಾ

Explain preventive relief and how the preventive relief will be granted ?

ಪ್ರತಿಬಂಧಕ ಪರಿಹಾರವನ್ನು ವಿವರಿಸಿರಿ ಮತ್ತು ಪ್ರತಿಬಂಧಕ ಪರಿಹಾರವನ್ನು ಹೇಗೆ ನೀಡಲಾಗುತ್ತದೆ ?

b) Write a short note on : Marks : 6

ಲಘು ಟಿಪ್ಪಣಿ ಬರೆಯಿರಿ :

Recovery of movable property.

ಚರ ವಸ್ತುವಿನ ವಸೂಲಾತಿ.

OR/ ಅಥವಾ

Cancellation of an instrument.

ಪತ್ರದ ರದ್ಧತಿ.

---

## First Semester 3 Year LL.B. Examination, June/July 2019
## CONTRACT – I (2018 Batch)

Duration : 3 Hours | Max. Marks : 80

**Instructions** : 1. Answer **all five** Units.
2. **One** essay type question and short note/problem is **compulsory** from **each** Unit.
3. Figures to the **right** indicate marks.
4. Answer should be written either in **English** or **Kannada completely**.

Q. No. 1. (a) "All contracts are agreements, but all agreements are not necessarily contracts". Explain. Marks : 10

"ಎಲ್ಲಾ ಕರಾರುಗಳು ಒಪ್ಪಂದಗಳು, ಆದರೆ ಎಲ್ಲಾ ಒಪ್ಪಂದಗಳು ಕರಾರಾಗಬೇಕೆಂದೇನಿಲ್ಲ". ವಿವರಿಸಿರಿ.

OR/ಅಥವಾ

"An agreement without consideration is void". Explain with exceptions, if any. Marks : 10

''ಪ್ರತಿಫಲವಿಲ್ಲದ ಒಪ್ಪಂದವು ಶೂನ್ಯವಾಗಿರುತ್ತದೆ''. ಇದನ್ನು ಅಪವಾದಗಳಿದ್ದರೆ ಅವುಗಳೊಂದಿಗೆ ವಿವರಿಸಿರಿ.

(b) 'A' made a proposal to 'B' in June 2017. 'B' accepted it in August 2018. Is it valid acceptance ? Marks : 6

'ಅ' ನು ಒಂದು ಪ್ರಸ್ತಾವನೆಯನ್ನು 'ಬ'ಗೆ ಜೂನ್ 2017 ರಲ್ಲಿ ಮಾಡುತ್ತಾನೆ. 'ಬ' ಅದನ್ನು ಆಗಸ್ಟ್ 2018 ರಂದು ಸ್ವೀಕರಿಸುತ್ತಾನೆ. ಇದು ಕ್ರಮಬದ್ಧವಾದ ಸ್ವೀಕೃತಿಯಾಗುತ್ತದೆಯೇ ?

OR/ಅಥವಾ

'A' goes to a departmental store and picks an article with price tag. When he goes to the counter to pay the price, the shopkeeper refuses to sell the article. 'A' wants to sue shopkeeper for breach of contract. Advise 'A'. Marks : 6

'ಅ' ನು ಒಂದು ಮಾರಾಟ ಮಳಿಗೆಗೆ ಹೋಗಿ ಬೆಲೆ ನಿಗದಿಪಡಿಸಿದ ಸಂಕೇತವುಳ್ಳ ವಸ್ತುವನ್ನು ಆಯ್ದುಕೊಳ್ಳುತ್ತಾನೆ. ಅವನು ಆ ವಸ್ತುವಿನ ಬೆಲೆಯನ್ನು ಸಂದಾಯ ಮಾಡಲಿಕ್ಕಾಗಿ ಗಲ್ಲಾ ಪೆಟ್ಟಿಗೆ (ಕ್ಯಾಶ್ ಕೌಂಟರ್)ಯ ಹತ್ತಿರ ಹೋದಾಗ ಆ ಮಳಿಗೆಯ ಮಾಲಿಕನು ಆ ವಸ್ತುವನ್ನು ಮಾರಲು ನಿರಾಕರಿಸುತ್ತಾನೆ. 'ಅ' ನು ಮಳಿಗೆಯ ಮಾಲಿಕನ ವಿರುದ್ಧ ಕರಾರು ಉಲ್ಲಂಘನೆಗಾಗಿ ದಾವೆ ಹೂಡಲು ಬಯಸುತ್ತಾನೆ. 'ಅ'ನಿಗೆ ಸಲಹೆ ನೀಡಿರಿ.

P.T.O.

Q. No. 2. (a) Discuss the legal effects of minor's agreement. Marks : 10

ಅಪ್ರಾಪ್ತ ವ್ಯಕ್ತಿಯ ಒಪ್ಪಂದದ ಕಾನೂನಾತ್ಮಕ ಪರಿಣಾಮಗಳನ್ನು ಚರ್ಚಿಸಿರಿ.

OR/ಅಥವಾ

"An agreement in restraint of trade is void". Explain with exceptions, if any. Marks : 10

"ವೃತ್ತಿ ಅಥವಾ ವ್ಯಾಪಾರವನ್ನು ನಿರ್ಬಂಧಿಸುವ ಒಂದು ಒಪ್ಪಂದವು ಶೂನ್ಯವಾಗಿರುತ್ತದೆ''. ಇದಕ್ಕೆ ಅಪವಾದಗಳಿದ್ದರೆ ಅವುಗಳೊಂದಿಗೆ ವಿವರಿಸಿರಿ.

(b) 'A' contracts with 'B' to kill 'C' for a sum of rupees one lakh. 'B' kills 'C'. 'A' refuses to pay. Can 'B' recover the amount ? Decide. Marks : 6

'ಕ' ನನ್ನು ಕೊಲೆ ಮಾಡಿದರೆ ಒಂದು ಲಕ್ಷ ರೂಪಾಯಿ ಕೊಡುವುದಾಗಿ 'ಅ'ನು 'ಬ'ನ ಜೊತೆ ಒಪ್ಪಂದ ಮಾಡಿಕೊಳ್ಳುತ್ತಾನೆ. 'ಬ'ನು 'ಕ'ನನ್ನು ಕೊಲೆ ಮಾಡುತ್ತಾನೆ. 'ಅ'ನು ಹಣ ಕೊಡಲು ನಿರಾಕರಿಸುತ್ತಾನೆ. 'ಬ'ನು ಹಣವನ್ನು ವಸೂಲಿ ಮಾಡಬಹುದೇ ? ನಿರ್ಣಯಿಸಿರಿ.

OR/ಅಥವಾ

Anand is a spiritual advisor. Bhaskar, an old Hindu man, is a disciple of Anand. Anand advises Bhaskar to gift away the whole of his property to him with a view to secure benefits to his soul in the next world. Bhaskar makes gift of whole of his property to Anand. Later Bhaskar wants to cancel this gift. Can he do so ? Advise Bhaskar. Marks : 6

ಆನಂದನು ಆಧ್ಯಾತ್ಮಕ ಗುರುವಾಗಿದ್ದಾನೆ. ಭಾಸ್ಕರ ಎಂಬ ಹಿಂದೂ ವೃದ್ಧನು ಆನಂದನ ಶಿಷ್ಯನಾಗಿರುತ್ತಾನೆ. ನಿಧನವಾದ ಮೇಲೆ ಆತ್ಮಕ್ಕೆ ಪರಲೋಕದಲ್ಲಿ ಸ್ಥಾನ ಸಿಗಬೇಕಾದರೆ ನಿನ್ನೆಲ್ಲ ಆಸ್ತಿಯನ್ನು ತನಗೆ ದಾನ ಮಾಡು ಎಂದು ಆನಂದನು ಭಾಸ್ಕರನಿಗೆ ಉಪದೇಶಿಸುತ್ತಾನೆ. ಅದರ ಪ್ರಕಾರ ಭಾಸ್ಕರನು ತನ್ನ ಎಲ್ಲಾ ಆಸ್ತಿ (ಸ್ವತ್ತು)ಯನ್ನು ಆನಂದನಿಗೆ ದಾನ ಮಾಡುತ್ತಾನೆ. ತದನಂತರ ಭಾಸ್ಕರನು ಆ ದಾನವನ್ನು ರದ್ದು ಮಾಡಲು ಬಯಸುತ್ತಾನೆ. ಅವನು ಹಾಗೆ ಮಾಡಬಹುದೇ ? ಭಾಸ್ಕರನಿಗೆ ಸಲಹೆಯನ್ನು ನೀಡಿರಿ.

Q. No. 3. (a) Explain in brief the various modes of discharge of contracts. Marks : 10

ಕರಾರುಗಳ ವಿಸರ್ಜನೆ (ಬಿಡುಗಡೆ)ಯ ವಿವಿಧ ವಿಧಾನಗಳನ್ನು ಸಂಕ್ಷಿಪ್ತವಾಗಿ ವಿವರಿಸಿರಿ.

OR/ಅಥವಾ

Explain the law relating to time and place of performance of contract. Marks : 10

ಕರಾರಿನ ನೆರವೇರಿಕೆಯ ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದ ಕಾನೂನನ್ನು ವಿವರಿಸಿರಿ.

(b) Rama promised to marry Seeta after the death of his father. But he married Suma when his father was alive. Seeta wants to sue Rama for breach of contract. Advise Seeta. Marks : 6

ರಾಮನು ತನ್ನ ತಂದೆಯ ನಿಧನದ ನಂತರ ಸೀತಾಳನ್ನು ಮದುವೆಯಾಗುವುದಾಗಿ ಅವಳಿಗೆ ವಚನ ಕೊಡುತ್ತಾನೆ. ಆದರೆ ಅವನು ತನ್ನ ತಂದೆ ಬದುಕಿರುವಾಗಲೇ ಸುಮಾಳನ್ನು ಮದುವೆಯಾಗುತ್ತಾನೆ. ಕರಾರಿನ ಉಲ್ಲಂಘನೆಗಾಗಿ ಸೀತಾಳು ರಾಮನ ವಿರುದ್ಧ ದಾವೆ ಹೂಡಲು ಬಯಸುತ್ತಾಳೆ. ಸೀತಾಳಿಗೆ ಸಲಹೆ ನೀಡಿರಿ.

OR/ಅಥವಾ

Umesh has agreed to sell his house to Ganesh for rupees 10 lakhs. But that house was destroyed by an accidental fire before Umesh could sell it to Ganesh. Ganesh institutes a suit against Umesh for breach of contract. Decide. Marks : 6

ಉಮೇಶನು ತನ್ನ ಮನೆಯನ್ನು ಗಣೇಶನಿಗೆ ಹತ್ತು ಲಕ್ಷ ರೂಪಾಯಿಗೆ ಮಾರಾಟ ಮಾಡಲು ಒಪ್ಪಿಕೊಳ್ಳುತ್ತಾನೆ. ಆದರೆ ಉಮೇಶನು ಆ ಮನೆಯನ್ನು ಗಣೇಶನಿಗೆ ಮಾರಾಟ ಮಾಡುವ ಮೊದಲೇ ಆಕಸ್ಮಿಕ ಅಗ್ನಿಯಿಂದ ಆ ಮನೆಯು ನಾಶವಾಯಿತು. ಕರಾರಿನ ಉಲ್ಲಂಘನೆಗಾಗಿ ಗಣೇಶನು ಉಮೇಶನ ವಿರುದ್ಧ ದಾವೆಯನ್ನು ಹೂಡುತ್ತಾನೆ. ನಿರ್ಣಯಿಸಿರಿ.

Q. No. 4. (a) What are the remedies available for a breach of contract ? Explain. Marks : 10

ಕರಾರಿನ ಉಲ್ಲಂಘನೆಗಾಗಿ ದೊರಕುವ ಪರಿಹಾರಗಳಾವುವು ? ವಿವರಿಸಿರಿ.

OR/ಅಥವಾ

Explain general and special damages with the help of decided cases. Marks : 10

ನಿರ್ಣಯಿಸಲ್ಪಟ್ಟ ಪ್ರಕರಣಗಳ ಸಹಾಯದಿಂದ ಸಾಮಾನ್ಯ ಮತ್ತು ವಿಶೇಷ ಪರಿಹಾರಧನಗಳನ್ನು ವಿವರಿಸಿರಿ.

(b) 'A' leaves an article at 'B's house by mistake. Can 'A' recover the article from 'B' ? Decide. Marks : 6

'ಅ'ನು ಒಂದು ವಸ್ತುವನ್ನು 'ಬ'ನ ಮನೆಯಲ್ಲಿ ಮರೆತು ಬಿಟ್ಟುಬಂದನು. 'ಅ'ನು 'ಬ'ನಿಂದ ಆ ವಸ್ತುವನ್ನು ಪಡೆದುಕೊಳ್ಳಬಹುದೇ ? ನಿರ್ಣಯಿಸಿರಿ.

OR/ಅಥವಾ

'A' contracts to supply goods on a specified day to 'B'. A does not supply on that day, as a consequence of it 'B' has to close the factory. Advise remedies available to 'B'. Marks : 6

ಒಂದು ನಿರ್ದಿಷ್ಟ ದಿನದಂದು ಸರಕನ್ನು ಪೂರೈಸುವುದಾಗಿ 'ಅ'ನು 'ಬ'ನ ಜೊತೆಯಲ್ಲಿ ಕರಾರು ಮಾಡಿಕೊಳ್ಳುತ್ತಾನೆ. ಆದರೆ ಆ ದಿನದಂದು 'ಅ' ನು ಸರಕನ್ನು ಪೂರೈಸುವುದಿಲ್ಲ. ಇದರಿಂದ 'ಬ'ನು ಕಾರ್ಖಾನೆಯನ್ನು ಮುಚ್ಚಬೇಕಾಗುತ್ತದೆ. 'ಬ'ನಿಗೆ ದೊರಕುವ ಪರಿಹಾರಗಳ ಕುರಿತು ಸಲಹೆಯನ್ನು ನೀಡಿರಿ.

Q. No. 5. (a) What is meant by specific performance ? Who can claim it ? Marks : 10

ನಿರ್ದಿಷ್ಟ ನೆರವೇರಿಕೆ ಎಂದರೇನು ? ಇದನ್ನು ಯಾರು ಕೇಳಬಹುದು ?

OR/ಅಥವಾ

Explain perpetual and temporary injunctions. Marks : 10

ಶಾಶ್ವತ ಮತ್ತು ತಾತ್ಕಾಲಿಕ ನಿರ್ಬಂಧಕಾಜ್ಞೆಗಳನ್ನು ವಿವರಿಸಿರಿ.

(b) Rama is the owner of a building. Shama diposesses Rama from this building by force. Advise Rama. Marks : 6

ರಾಮ ಕಟ್ಟಡವೊಂದರ ಮಾಲಿಕನಾಗಿದ್ದಾನೆ. ಈ ಕಟ್ಟಡದಿಂದ ಶ್ಯಾಮನು ರಾಮನನ್ನು ಬಲಪ್ರಯೋಗದಿಂದ ಹೊರಹಾಕಿದ್ದಾನೆ. ರಾಮನಿಗೆ ಸಲಹೆ ನೀಡಿರಿ.

OR/ಅಥವಾ

B, being a medical advisor, threatens to publish patient C's written communications that are with him showing that C has led an immoral life. What course of action would you advise to C ? Explain. Marks : 6

'ಬ' ಎಂಬ ವೈದ್ಯಕೀಯ ಸಲಹೆಗಾರನು ತನ್ನ ರೋಗಿಯಾದ 'ಕ'ನ ಅನೈತಿಕ ವ್ಯವಹಾರದಲ್ಲಿ ತೊಡಗಿಕೊಂಡಿರುವ ಪತ್ರ ವ್ಯವಹಾರಗಳನ್ನು ಬಹಿರಂಗಗೊಳಿಸುವುದಾಗಿ 'ಕ'ನಿಗೆ ಬೆದರಿಕೆ ಹಾಕುತ್ತಾನೆ. ನೀವು ಯಾವ ಪರಿಹಾರವನ್ನು 'ಕ'ನಿಗೆ ಸೂಚಿಸುತ್ತೀರಿ ? ವಿವರಿಸಿರಿ.

**First Semester 3 Year LL.B. Examination, December 2018**
**CONTRACT – I**
**(2018 Batch)**

Duration : 3 Hours Max. Marks : 80

**Instructions** : 1) Answer **all five** units.
2) **One** essay type question and short note/problem is compulsory from **each** Unit.
3) Figures to the **right** indicate marks.
4) Answer should be written **either** in English or Kannada **completely**.

UNIT – I

Q. No. 1. a) Define Proposal. Explain the circumstances under which it lapses. Marks : 10
ಪ್ರಸ್ತಾವನೆಯನ್ನು ವ್ಯಾಖ್ಯಾನಿಸಿರಿ. ಅದು ಯಾವ ಸಂದರ್ಭಗಳಲ್ಲಿ ರದ್ದಾಗುತ್ತದೆ? ವಿವರಿಸಿರಿ.

OR

Q. No. 1. a) An agreement without consideration is void. Discuss. Marks : 10
ಪ್ರತಿಫಲವಿಲ್ಲದ ಒಪ್ಪಂದ ಶೂನ್ಯ. ಚರ್ಚಿಸಿರಿ.

Q. No. 1. b) Solve the following problem : Marks : 6
ಕೆಳಗಿನ ಸಮಸ್ಯೆ ಬಿಡಿಸಿರಿ :

Nataraj posts his letter of proposal to sell his house to Lingaraj on 16th March 18. Lingaraj receives this letter of proposal on 18th March 18. On the same day, Lingaraj posts his letter of acceptance. Thereafter Lingaraj sends a telegram revoking his acceptance on 19th March 18. Nataraj receives Lingaraj's acceptance letter on 19th March 18 and telegram on 20th March 18. Is there a contract between Nataraj and Lingaraj ?

ನಟರಾಜನು ತನ್ನ ಮನೆಯನ್ನು ಮಾರುವ ಪ್ರಸ್ತಾವನೆಯನ್ನು ಲಿಂಗರಾಜ್‌ನಿಗೆ ದಿನಾಂಕ 16-3-2018 ರಂದು ಅಂಚೆಪೆಟ್ಟಿಗೆಗೆ ಹಾಕುತ್ತಾನೆ. ಲಿಂಗರಾಜ್‌ನಿಗೆ ಈ ಪ್ರಸ್ತಾವನೆ ದಿನಾಂಕ 18-3-2018 ರಂದು ತಲುಪುತ್ತದೆ. ಅದೇ ದಿನ ಲಿಂಗರಾಜನು ತನ್ನ ಸ್ವೀಕೃತಿ ಪತ್ರವನ್ನು ಅಂಚೆ ಪೆಟ್ಟಿಗೆಗೆ ಹಾಕುತ್ತಾನೆ. ತದನಂತರ ಲಿಂಗರಾಜನು ತನ್ನ ಸ್ವೀಕೃತಿಯನ್ನು ಹಿಂಪಡೆಯುವ ಉದ್ದೇಶದಿಂದ ದಿನಾಂಕ 19-3-2018 ರಂದು ತಂತಿ ಸಂದೇಶವನ್ನು ಕಳುಹಿಸುತ್ತಾನೆ. ನಟರಾಜ್‌ನು ಲಿಂಗರಾಜ್‌ನ ಸ್ವೀಕೃತಿ ಪತ್ರವನ್ನು 19-3-2018 ರಂದು ಮತ್ತು ತಂತಿ ಸಂದೇಶವನ್ನು 20-3-2018 ರಂದು ಪಡೆಯುತ್ತಾನೆ. ಇಲ್ಲಿ ಇಬ್ಬರ ಮಧ್ಯೆ ಒಡಂಬಡಿಕೆಯಾಗಿದೆಯೇ ?

OR

Q. No. 1. b) Ganesh goes to a departmental store and picks an article with price tag. When he goes to the cash counter to pay the price, the shopkeeper refuses to sell the article. Ganesh sues the shopkeeper for breach of contract. Can he do so ? Marks : 6

ಗಣೇಶ್‌ನು ಒಂದು ಮಾರಾಟ ಮಳಿಗೆಗೆ ಹೋಗಿ ಬೆಲೆ ನಿಗದಿಪಡಿಸಿದ ಸಂಕೇತವುಳ್ಳ ವಸ್ತುವನ್ನು ಆಯ್ದುಕೊಳ್ಳುತ್ತಾನೆ. ಅವನು ನಗದು ಸಂದಾಯ ಮಾಡುವ ಸ್ಥಳಕ್ಕೆ ಹೋಗಿ ವಸ್ತುವನ್ನು ಪಡೆದುಕೊಳ್ಳುತ್ತಿರುವಾಗ ಮಳಿಗೆಯ ಮಾಲೀಕನು ಆ ವಸ್ತುವನ್ನು ಮಾರಲು ತಿರಸ್ಕರಿಸುತ್ತಾನೆ. ಒಡಂಬಡಿಕೆಯ ಉಲ್ಲಂಘನೆಗಾಗಿ ಗಣೇಶನು ಮಳಿಗೆಯ ಮಾಲೀಕನ ವಿರುದ್ಧ ದಾವೆ ಹೂಡುತ್ತಾನೆ. ಅವನು ಹಾಗೆ ಮಾಡಬಹುದೇ ?

## UNIT – II

Q. No. 2. a) Discuss the effects of minor's agreement. Marks : 10

ಅಪ್ರಾಪ್ತ ವ್ಯಕ್ತಿಯು ಮಾಡಿಕೊಂಡ ಒಪ್ಪಂದದ ಪರಿಣಾಮಗಳನ್ನು ಚರ್ಚಿಸಿರಿ.

OR

Q. No. 2. a) Define fraud. Distinguish it from misrepresentation. Marks : 10

ವಂಚನೆಯನ್ನು ವ್ಯಾಖ್ಯಾನಿಸಿರಿ. ಇದನ್ನು ತಪ್ಪು ನಿರೂಪಣೆಯಿಂದ ವಿಂಗಡಿಸಿ.

Q. No. 2. b) Solve the following problem. Marks : 6

ಕೆಳಗಿನ ಸಮಸ್ಯೆ ಬಿಡಿಸಿರಿ :

Amit promises to obtain for Amar an employment in the National School. Amar promises to pay Rs. 5 lakhs to Amit. Is this agreement valid ?

ರಾಷ್ಟ್ರೀಯ ಶಾಲೆಯಲ್ಲಿ ಅಮರ್‌ನ ಉದ್ಯೋಗಕ್ಕಾಗಿ ಅಮಿತ್ ಭರವಸೆ ನೀಡುತ್ತಾನೆ ಅಮರ್‌ನು ಅಮಿತ್‌ಗೆ 5 ಲಕ್ಷ ರೂ. ಕೊಡುತ್ತೇನೆ ಎಂದು ಆಶ್ವಾಸನೆ ನೀಡುತ್ತಾನೆ. ಈ ಒಪ್ಪಂದವು ಊರ್ಜಿತವಾಗಿದೆಯೇ ?

OR

Q. No. 2. b) A agrees to pay B one lakh rupees, if B will marry A's daughter C. C was dead at the time of the agreement. Decide. Marks : 6

ಒಂದು ವೇಳೆ 'ಬಿ' ಯು 'ಎ' ಯ ಮಗಳಾದ 'ಸಿ' ಯನ್ನು ಮದುವೆಯಾದರೆ 'ಎ' ಯು 'ಬಿ' ಗೆ ಒಂದು ಲಕ್ಷ ರೂಪಾಯಿ ಕೊಡುವುದಾಗಿ ಒಪ್ಪಿಕೊಳ್ಳುತ್ತಾನೆ. 'ಸಿ' ಯು ಮದುವೆಯ ವೇಳೆಗೆ ಸಾಯುತ್ತಾಳೆ. ನಿರ್ಣಯಿಸಿರಿ.

## UNIT – III

Q. No. 3. a) Discuss doctrine of frustration with the help of leading cases. Marks : 10

ನಿರ್ಧರಿತ ಪ್ರಕರಣಗಳ ಸಹಾಯದಿಂದ ವಿಫಲತಾ ಸಿದ್ಧಾಂತವನ್ನು ಚರ್ಚಿಸಿರಿ.

OR

Q. No. 3. a) What is breach of contract ? Distinguish between actual breach and anticipatory breach of contract. Marks : 10

ಕರಾರು ಉಲ್ಲಂಘನೆ ಎಂದರೇನು ? ಪ್ರಸ್ತುತ ಉಲ್ಲಂಘನೆ ಮತ್ತು ನಿರೀಕ್ಷಣಾ ಕರಾರು ಉಲ್ಲಂಘನೆಗಳನ್ನು ವಿಂಗಡಿಸಿರಿ.

Q. No. 3. b) Solve the following problem : Marks : 6

ಕೆಳಗಿನ ಸಮಸ್ಯೆ ಬಿಡಿಸಿರಿ :

A Kala Bhavan was agreed to be let out on a certain day. Before that day, it was destroyed by fire. Discuss the consequences.

ನಿಗದಿತ ದಿನದಂದು ಒಂದು ಕಲಾ ಭವನವನ್ನು ಬಾಡಿಗೆಗೆ ಕೊಡಲು ಒಪ್ಪಂದವಾಗಿರುತ್ತದೆ. ಆ ದಿನದ ಮೊದಲೇ ಅದು ಬೆಂಕಿಯಿಂದ ನಾಶವಾಗುತ್ತದೆ. ಪರಿಣಾಮಗಳನ್ನು ಚರ್ಚಿಸಿರಿ.

OR

Q. No. 3. b) Ajit agreed to deliver the goods to Avinash for certain price on 13-11-2018 without fail. Time is essence of the contract. Ajit fails to deliver the goods on 13-11-2018. Avinash rescinds the contract and files a suit to recover damages. Decide. Marks : 6

ಅಜಿತ್‌ನು ಅವಿನಾಶ್‌ನಿಗೆ 13-11-2018 ರಂದು ಒಂದು ನಿರ್ದಿಷ್ಟ ಬೆಲೆಗೆ ಸರಕುಗಳನ್ನು ತಪ್ಪಿಸದೇ ಪೂರೈಸಲು ಒಪ್ಪಿದನು. ವೇಳೆಯು ಒಡಂಬಡಿಕೆಯ ಅತ್ಯವಶ್ಯಕ ಘಟಕವಾಗಿದೆ. 13-11-2018 ರಂದು ಸರಕುಗಳನ್ನು ಪೂರೈಸುವಲ್ಲಿ ಅಜಿತ್‌ನು ವಿಫಲವಾದನು. ಅವಿನಾಶ್‌ನು ಒಡಂಬಡಿಕೆಯನ್ನು ರದ್ದು ಮಾಡಿ ಪರಿಹಾರ ಧನ ಕೇಳಿ ಮೊಕದ್ದಮೆ ಹೂಡುತ್ತಾನೆ. ನಿರ್ಣಯಿಸಿರಿ.

## UNIT – IV

Q. No. 4. a) Explain general damages and special damages with the help of decided cases. Marks : 10

ನಿರ್ಧರಿತ ಪ್ರಕರಣಗಳ ಸಹಾಯದೊಂದಿಗೆ ಸಾಮಾನ್ಯ ಮತ್ತು ವಿಶೇಷ ಪರಿಹಾರಗಳನ್ನು ವಿವರಿಸಿ.

OR

Q. No. 4. a) What is Quasi-contract ? Explain the different types of Quasi-contracts. Marks : 10
ಅರೆ-ಒಡಂಬಡಿಕೆ ಎಂದರೇನು ? ವಿವಿಧ ರೀತಿಯ ಅರೆ-ಒಡಂಬಡಿಕೆಗಳನ್ನು ವಿವರಿಸಿರಿ.

Q. No. 4. b) Write short note on :
ಟಿಪ್ಪಣಿ ಬರೆಯಿರಿ :
Liquidated damages and penalty. Marks : 6
ನಿರ್ಧರಿತ ಧನ ಪರಿಹಾರ ಹಾಗೂ ದಂಡ.

OR

Nominal damages. Marks : 6
ಹೆಸರಿಗೆ (ಮಾತ್ರ) ಪರಿಹಾರ ಧನ

## UNIT – V

Q. No. 5. a) Explain what contracts can be specifically enforced. Marks : 10
ಯಾವ ಕರಾರುಗಳನ್ನು ನಿರ್ದಿಷ್ಟವಾಗಿ ಊರ್ಜಿತಗೊಳಿಸಬಹುದು ಎಂಬುದನ್ನು ವಿವರಿಸಿ.

OR

Q. No. 5. a) Explain the circumstances in which courts cannot grant injunction. Marks : 10
ಯಾವ ಸಂದರ್ಭಗಳಲ್ಲಿ ನ್ಯಾಯಾಲಯಗಳು ತಡೆಯಾಜ್ಞೆಯನ್ನು ಕೊಡಲು ಬರುವುದಿಲ್ಲ ?

Q. No. 5. b) Write short note on : Marks : 6
ಟಿಪ್ಪಣಿ ಬರೆಯಿರಿ :
Declaratory Decree.
ಘೋಷಣಾತ್ಮಕ ತೀರ್ಪುಗಳು.

OR

Recovery of possession of immovable property. Marks : 6
ಸ್ಥಿರ ಆಸ್ತಿಯ ಸ್ವಾಧೀನತೆಯನ್ನು ಮರಳಿ ಪಡೆಯುವಿಕೆ.